ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1250 |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ದಿನಾಂಕ | : | 08/03/2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳು ಮರಸಭೆಗಳಾಗಿವೆ; (ಜಿಲ್ಲಾವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಈ ಕೆಳಕಂಡ ಗ್ರಾಮ ಪಂಚಾಯಿತಿಗಳನ್ನು ಮರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ:<br>1. ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರ ಗ್ರಾಮ ಪಂಚಾಯಿತಿಯನ್ನು ಸೋಮೇಶ್ವರ ಮರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br>2. ಬೆಂಗಳೂರು ನಗರ ಜಿಲ್ಲೆಯ ಮಾದವಾರ & ಸಿದ್ದನಹೊಸಹಳ್ಳಿ ಗ್ರಾಮ ಪಂಚಾಯಿತಿಗಳೊಂದಿಗೆ ಮಾದನಾಯಕನಹಳ್ಳಿ ಗ್ರಾಮ ಪಂಚಾಯಿತಿಗಳನ್ನೊಳಗೊಂಡು ರೂಪಿಸಲಾಗಿದ್ದ ಮಾದನಾಯಕನಹಳ್ಳಿ ಮರಸಭೆಗೆ ಲಕ್ಷ್ಮೀಪುರ, ಚಿಕ್ಕಬಿದರಕಲ್ಲು ಮತ್ತು ಶ್ರೀಕಂಠಪುರ ಗ್ರಾಮ ಪಂಚಾಯಿತಿಗಳನ್ನು ಸೇರ್ಪಡೆಗೊಳಿಸಿ ಮಾದನಾಯಕನಹಳ್ಳಿ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br>3. ಬೆಂಗಳೂರು ನಗರ ಜಿಲ್ಲೆಯ ಸೊಣ್ಣಪನಹಳ್ಳಿ ಗ್ರಾಮ ಪಂಚಾಯಿತಿಯನ್ನು ಹುಣಸಮಾರನಹಳ್ಳಿ ಗ್ರಾಮ ಪಂಚಾಯಿತಿಯೊಂದಿಗೆ ಸೇರ್ಪಡೆಗೊಳಿಸಿ ಹುಣಸಮಾರನಹಳ್ಳಿ ಮರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br>4. ಬೆಂಗಳೂರು ನಗರ ಜಿಲ್ಲೆಯ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಚಿಕ್ಕಬಾಣಾವರ ಗ್ರಾಮ ಪಂಚಾಯಿತಿಯೊಂದಿಗೆ ಸೇರ್ಪಡೆಗೊಳಿಸಿ ಚಿಕ್ಕಬಾಣಾವರ ಮರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. |
| (ಆ) | ಗ್ರಾಮ ಪಂಚಾಯತ್‌ಗಳನ್ನು ಮರಸಭೆಗಳನ್ನಾಗಿ ಪರಿವರ್ತಿಸಲು ಬೇಕಾದ ಜನಸಂಖ್ಯೆ ಎಷ್ಟು; | ಕರ್ನಾಟಕ ಮರಸಭೆಗಳ ಅಧಿನಿಯಮ 1964ರ ಕಲಂ 3(1), 3(2) ರಲ್ಲಿ ನಿರ್ದಿಷ್ಟಪಡಿಸಿರುವ ಮಾನದಂಡಗಳನ್ವಯ ಮರಸಭೆಯನ್ನಾಗಿ ಪರಿವರ್ತಿಸಲು ಜನಸಂಖ್ಯೆಯು 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು. |
| (ಇ) | ಗ್ರಾಮ ಪಂಚಾಯತ್‌ಗಳನ್ನು ಮರಸಭೆಯನ್ನಾಗಿ ಪರಿಗಣಿಸಿದ ಬಳಿಕ ಚುನಾವಣೆ ನಡೆಸಲು ಬೇಕಾಗುವ ಕಾಲಾವಧಿಯೆಷ್ಟು? | ಕರ್ನಾಟಕ ಮರಸಭೆಗಳ ಅಧಿನಿಯಮ 1964ರ ಕಲಂ 357(ಬಿ) ರನ್ವಯ ಗ್ರಾಮ ಪಂಚಾಯಿತಿಯ ಸದಸ್ಯರಾಗಿ ತೆರವು ಮಾಡುವ ವ್ಯಕ್ತಿಗಳನ್ನೊಳಗೊಂಡ ಮಧ್ಯಕಾಲೀನ ಕೌನ್ಸಿಲ್‌ನ್ನು ರಚಿಸಬೇಕಿರುತ್ತದೆ. ಮಧ್ಯಕಾಲೀನ ಕೌನ್ಸಿಲ್ ರಚಿಸಲು ಅವಕಾಶವಿಲ್ಲದಿದ್ದಲ್ಲಿ ಕರ್ನಾಟಕ ಮರಸಭೆಗಳ ಅಧಿನಿಯಮ 1964 ರ ಕಲಂ-315 ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಬೇಕಿರುತ್ತದೆ.<br><br>ಕಲಂ-358 ರನ್ವಯ ಮಧ್ಯಕಾಲೀನ ಕೌನ್ಸಿಲ್ ರಚನೆಗೊಂಡ ದಿನಾಂಕದಿಂದ 6 ತಿಂಗಳುಗಳ ಅವಧಿಯೊಳಗೆ ಹೊಸ ಮುನ್ಸಿಪಲ್ ಕೌನ್ಸಿಲ್‌ನ್ನು ರಚಿಸುವ ಬಗ್ಗೆ ಚುನಾವಣೆ ಪ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ. |

| | | |
|---|---|---|
| | | ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಪುರಸಭೆಯ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಅಗತ್ಯ ಜನಸಂಖ್ಯೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಲಾಗುತ್ತದೆ. ಆನಂತರ ಚುನಾವಣಾ ಆಯೋಗದಿಂದ ಚುನಾವಣೆಗಳನ್ನು ನಡೆಸಲು ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ನಅಇ 18 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು.